# ಅಹಂ ಶೂನ್ಯ

ಅಹಂ ಮತ್ತು ಶೂನ್ಯ ಇವೆರಡೂ ಸಾಪೇಕ್ಷ ತತ್ವಗಳು. ಮನುಷ್ಯ ಜೀವಕ್ಕೆ ಇವೆರಡೂ ಬೇಕು. ಇವು ಪರಸ್ಪರಾವಲಂಬಿಗಳೂ ಹೌದು; ಸ್ವಾವಲಂಬಿಗಳೂ ಹೌದು. ಅಹಂ ಮತ್ತು ಶೂನ್ಯ ಇವೆರಡು ವೇದಾಂತಗಳಲ್ಲಿಯೂ ಲೌಕಿಕದಲ್ಲಿಯೂ ಬಳಕೆಯಾಗುವ ಪದ. 'ಅಹಂ' ಎಂದಾಗ ನಮ್ಮ ವರ್ಣಮಾಲೆಯಲ್ಲಿರುವ ಅಕಾರದಿಂದ ಹ ಕಾರದ ವರೆಗಿರುವ ವರ್ಣಸಮಾಮ್ನಾಯವನ್ನು ತಿಳಿಸುತ್ತದೆ. ನಮ್ಮ ಪೂರ್ವಿಕರು ವಿವರವಾಗಿ ಹೇಳಬಹುದಾದುದನ್ನು ಸಂಕ್ಷಿಪ್ತಗೊಳಿಸಿ ಹೇಳುತ್ತಿದ್ದರು. ಹೀಗೆ ಸಂಕ್ಷಿಪ್ತವಾಗಿ ಹೇಳುವುದಕ್ಕೆ 'ಸೂತ್ರ' ಎಂಬ ಪರಿಭಾಷೆಯ ಸಂಜ್ಞೆಯಿತ್ತು. ಇಲ್ಲಿರುವ 'ಅಹಂ' ಎಂಬುದು ಭಾಷಾತತ್ವದ ದೃಷ್ಟಿಯಿಂದ ವರ್ಣಸಮಾಮ್ನಾಯವನ್ನು ಸಂಕೇತಿಸುತ್ತದೆ. ಆದರೆ, 'ಅಹಂ' ಎಂಬ ಮಾತು ಬಳಕೆ ಲೌಕಿಕವಾಗಿಯೂ ಉಂಟು.

ನಾವು 'ಇವನಿಗೆ ತುಂಬಾ ಅಹಂಕಾರ' 'ಇವನ ಅಹಂ ಎಷ್ಟು ನೋಡು' ಎಂಬಂತಹ ಮಾತುಗಳನ್ನು ಬಳಸುತ್ತಿರುತ್ತೇವೆ. ಇದು ಮನುಷ್ಯನ ಗುಣಕ್ಕೋ ವ್ಯಕ್ತಿತ್ವಕ್ಕೋ ಹೇಳುವ ಮಾತು. ಈ ಮಾತಿನಲ್ಲಿರುವ 'ಅಹಂ' ಎಂಬುದು ತತ್ವಜ್ಞಾನದಲ್ಲಿ ಬೇರೆಯದೇ ಆದ ಅರ್ಥವನ್ನು ಕೊಡುತ್ತದೆ. ಆದರೆ, ಜಗತ್ತು ಹುಟ್ಟಿದಂದಿನಿಂದ ಯಾರನ್ನು ಕೇಳಿದರೂ 'ನಾನು ನಾನು' ಎನ್ನುತ್ತಲೇ ಇದ್ದಾರೆ. ಕನ್ನಡದಲ್ಲಿ 'ನಾನು' ಎಂಬುದು ಸಂಸ್ಕೃತದಲ್ಲಿ 'ಅಹಂ' ಆಗುತ್ತದೆ. ಆದರೆ, ನಾನು ಎಂಬುದು ಕನ್ನಡದ ಸರ್ವನಾಮ. ಇದಕ್ಕೆ ಪರಿಮಿತವಾದ ಅರ್ಥ ಉಂಟು. 'ಅಹಂ' ಎಂಬ ಪದಕ್ಕೆ ಇರುವ ತಾತ್ವಿಕಾರ್ಥ 'ನಾನು' ಎಂಬುದಕ್ಕಿಲ್ಲ. ಆದರೆ, ನಾನು ಎಂಬುದು ವ್ಯಕ್ತಿಗತವಾಗಿ ಬಳಕೆಯಾಗುತ್ತದೆಂಬುದು ಇಲ್ಲಿ ನಿಶ್ಚಿತ.

ಜಗತ್ತಿನಲ್ಲಿ ಹುಟ್ಟಿದವರೆಲ್ಲ ಈಗ ಇಲ್ಲ. ಆದರೆ, ಅವರು ಹೇಳುತ್ತಿದ್ದ 'ಅಹಂ' ಎಂಬುದು ಅವರ ಜತೆಯಲ್ಲಿಯೇ ಹೋಯಿತೆ ಅಥವಾ ಇದೆಯೆ ಇರುವುದಾದರೆ ಅದು ಯಾವ ರೂಪದಲ್ಲಿದೆ? ಅದು ಹೇಗೆ ಇದೆ? ಈ ಮಾತನ್ನು ಭಾರತೀಯ ದರ್ಶನಗಳು ಆಳವಾಗಿ ಯೋಚಿಸಿವೆ. ಸೈದ್ಧಾಂತಿಕವಾಗಿ ವಾಗ್ವಾದವನ್ನು ನಡೆಸಿವೆ. ಈ ಪ್ರಶ್ನೆಗೆ ಅದ್ವಯವಾದಿಗಳು ಹುಡುಕಾಟ ಮಾಡಿದ್ದಾರೆ. ಹೀಗಾಗಿ, ಇದು ಅದ್ವೈತ ವೇದಾಂತದ ಮೊದಲನೆಯ ಪ್ರಶ್ನೆಯೂ ಆಗಿದೆ.

ಆದರೆ, ಇದು ನಮಗೆ ಅರ್ಥವಾಗದೆ ಗೋಡೆಯಾಗಿ ನಿಂತುಬಿಟ್ಟಿದೆ. ಇಲ್ಲಿರುವ ಅಹಂ ಎಂಬುದು 'ದೇಹ' ಎಂಬ ದೃಢವಿಶ್ವಾಸ. ಅದರಿಂದ ಇದು ಪೂರ್ವಗ್ರಹ. ಇದು ವ್ಯಾಧಿ. ಈ 'ನಾನು' ಅಥವ ಅಹಂ ಎಂಬುದು ಎಲ್ಲ ಕಾಲದಲ್ಲೂ ಇತ್ತು, ಇರುತ್ತದೆ. ಇದನ್ನು ಇಲ್ಲವೆಂದು ಹೇಳುವ ಹಲವು ತತ್ವಜ್ಞಾನ ಶಾಖೆಗಳೂ ಉಂಟು. ಬೌದ್ಧಶಾಖೆ 'ನಾನು' ಎನ್ನುವುದು ಇಲ್ಲ, ಇರುವುದೆಲ್ಲ 'ಶೂನ್ಯ' ಎಂದು ಪ್ರತಿಪಾದಿಸುತ್ತದೆಯಷ್ಟೆ. ಅದ್ವೈತವೂ 'ಶೂನ್ಯ' ಎಂದು ಹೇಳುವುದುಂಟು. ಆದರೆ, ಈ ಶೂನ್ಯ ಆಕಾಶದಂತೆ ಶೂನ್ಯ. ಬೌದ್ಧಶಾಖೆಯದು ಶುದ್ಧಶೂನ್ಯ. ಅದ್ವೈತಿಗಳ ಶೂನ್ಯವು ಪೂರ್ಣದಲ್ಲಿ ಕಾಣುವ ಅನ್ಯಭಾವದ ಶೂನ್ಯವೆಂದು ನಾವು ತಿಳಿಯುವುದು ಅವಶ್ಯ.

ಈ ಮಾತನ್ನು ಇನ್ನಷ್ಟು ಸ್ಪಷ್ಟವಾಗಿ ತಿಳಿಯಬೇಕಾದರೆ ಸಂಸ್ಕೃತದ ಮಹಾ ನಾಟಕಕಾರನಾದ ಭವಭೂತಿಯ ಒಂದು ಮಾತಿನಿಂದ ವಿವರಿಸಿಕೊಳ್ಳೋಣ. ಅವನು ಬರೆದ ಮೂರು ನಾಟಕಗಳಲ್ಲಿ 'ಉತ್ತರರಾಮಚರಿತೆ'ಯೂ ಒಂದು. ಇದು ಸಂಸ್ಕೃತದ ಪ್ರಸಿದ್ಧ ನಾಟಕ. ಈ ಉತ್ತರರಾಮಚರಿತದಲ್ಲಿ ಸೀತಾರಾಮರಿಬ್ಬರು ಮಾತನಾಡುತ್ತಿದ್ದಾರೆ. ಆಗ 'ರಾತ್ರಿರೇವಂ ವ್ಯರಂಸೀತ್' ರಾತ್ರಿಯು ಹೀಗೆ ಕಳೆಯಿತು ಎಂದು ಭವಭೂತಿ ಬರೆದನಂತೆ. ಅದನ್ನು ಕೇಳಿದ ಕಾಳಿದಾಸ ಒಂದು ಸೊನ್ನೆ ಹೆಚ್ಚು ಎಂದು ಹೇಳಿದನಂತೆ. ಅಂದರೆ 'ರಾತ್ರಿರೇವ ವ್ಯರಂಸೀತ್' ಎಂದಿರಬೇಕೆಂಬುದು ಕಾಳಿದಾಸನ ಅಭಿಪ್ರಾಯ. ಇಲ್ಲಿ ಛಂದಸ್ಸು ವ್ಯತ್ಯಾಸ ಆಗಲಿಲ್ಲ. ಆದರೆ ಅರ್ಥ ಮಾತ್ರ ವಿಸ್ತಾರವಾಯಿತು. ರಾತ್ರಿಯು ಕಳೆಯಿತೇ ಹೊರತು; ಸೀತಾರಾಮರ ಮಾತು ಮುಗಿಯಲಿಲ್ಲ! ಎಂದು ಈ ಮಾತಿನ ಅರ್ಥವಿಸ್ತಾರ. ಇದು ನಡೆದ ಸಂಗತಿಯೋ ಅಲ್ಲವೊ ಎಂಬ ಮಾತು ಬೇರೆ. ಆದರೆ, ಈ ಮಾತು 'ಸೊನ್ನೆ'ಯ ಇರುವಿಕೆಯನ್ನೂ ಅದರ ಇಲ್ಲದಿರುವಿಕೆಯನ್ನೂ ಮಾರ್ಮಿಕವಾಗಿ ಪರಿಶೀಲಿಸುತ್ತದೆ. ಬೌದ್ಧಶಾಖೆಗೂ ಅದ್ವೈತಕ್ಕೂ ಇರುವ ಭೇದ ಸೊನ್ನೆ ಮಾತ್ರ. ಸೊನ್ನೆಗೆ ಬೆಲೆಯುಂಟು, ಬೆಲೆಯಿಲ್ಲ. ಆದರೆ, ಒಂದರ ಮಗ್ಗುಲಲ್ಲಿ ಶೂನ್ಯ ಇದ್ದರೆ ಮಾತ್ರ ಬೆಲೆ. ಅದು ಇಲ್ಲದಿದ್ದಾಗ ಇಲ್ಲ. ಹೀಗಾಗಿ, ಅದ್ವೈತ ತತ್ವಜ್ಞಾನದಲ್ಲಿ ಅಹಂ ಎಲ್ಲವನ್ನು ಒಳಗೊಂಡರೂ ತೊಂದರೆಯಿಲ್ಲ. ಎಲ್ಲವನ್ನು ಬಿಟ್ಟರೂ ಹಾನಿಯಿಲ್ಲ. ಅದಷ್ಟು ಇದಷ್ಟು ಆಗಿದ್ದರೆ ಮಾತ್ರ ಹಾನಿ.

'ಅಹಂ' ಎಂಬುದು ಏಕಾರ್ಥವುಳ್ಳ ಪದವಲ್ಲ; ಅದಕ್ಕೆ ಬಹು ಅರ್ಥಗಳುಂಟು. ಆದರೆ, ವೈಯಕ್ತಿಕ ನೆಲೆಯಿಂದ ಸಾಮಷ್ಟಿಕ ನೆಲೆಯ ವರೆಗೂ ಏರಬಲ್ಲ ಅರ್ಥ ಇದಕ್ಕಿದೆ. ಯಾರು 'ಅಹಂ' ಎಂಬುದಕ್ಕೆ 'ಕಾರ' ಎಂಬ ಪ್ರತ್ಯಯ ಸೇರಿಕೊಂಡಾಗ ಇಂಗ್ಲಿಷಿನ 'ಈಗೋ' ಆಗುತ್ತದೆ. ಅವನು 'ದುರಹಂಕಾರಿ' ಆಗುತ್ತಾನೆ. ಹಾಗೆ ಆಗಕೂಡದೆಂದರೆ 'ಶೂನ್ಯ'ಭಾವ ತಾಳಬೇಕಾಗುತ್ತದೆ. 'ಅಹಂ' ಎಂಬುದು ವೈಯಕ್ತಿಕವಾದಾಗ ಅದನ್ನು 'ಶೂನ್ಯ'ವಾಗಿಸಿಕೊಳ್ಳಬೇಕು. ಆಗ ಅವನು ಸಮಷ್ಟಿಪುರುಷನಾಗುತ್ತಾನೆ; ನಿಜವಾದ ಅರ್ಥದಲ್ಲಿ ಸಮಾಜಪುರುಷನಾಗುತ್ತಾನೆ. ವೇದ ಹೇಳುವ 'ಸಂಗಚ್ಛಧ್ವಂ ಸಂ ವದಧ್ವಂ, ಸಂ ವೋ ಮನಾಂಸಿ' ಎಂಬ ಮಾತಿಗೆ ಅರ್ಥ ಬರುತ್ತದೆ. ನಾವು 'ಅಹಂ' ತತ್ವದಿಂದ 'ನಿರಹಂ' ತತ್ವಕ್ಕೂ 'ಶೂನ್ಯ'ಸಂಪಾದನೆಗೂ ಏರಿನಿಂತರೆ ಆಗುವ ಭಾವಕೋಶ ಅನನ್ಯವಾದುದೇ ಸೈ. ಅಹಂ ಎನ್ನುವುದು ಇದೆಯಾದರೆ ಅದರಲ್ಲಿ ಎಲ್ಲಾ ಇದೆಯೆಂದಾಗಬೇಕು. ಅಷ್ಟು ಬೆಳೆಯಬೇಕು. ಇನ್ನೂ ಯಾವುದಕ್ಕೂ ಎಡೆಯಿಲ್ಲ ಅನ್ನುವಂತೆ ಬೆಳೆದು ತುಂಬಬೇಕು. ಇಲ್ಲವೆನ್ನುವುದಾದರೆ ತಾನೂ ಇಲ್ಲವೆನ್ನುವಷ್ಟರ ಮಟ್ಟಿಗೆ ಇಲ್ಲವಾಗಬೇಕು. ಅದು ಶೂನ್ಯ. ಆಗ ಬಾಳು ಪೂರ್ಣವಾಯಿತೆಂದೇ ಅರ್ಥ. ಇದು ಬಾಳು ಪರಿಪೂರ್ಣವಾಗುವ ಪರಿ; ಆದರೆ, ಇದನ್ನು ಅರಿಯಲು ಒಳಗಣ್ಣು ವಿಸ್ತಾರ ಪಡೆಯಬೇಕು ಅಷ್ಟೆ!

■ **ಪುರಂಜೀವಿ**

## ಮಾತೇ ಮುತ್ತು

- ಯಾರು ಹಳ್ಳ ತೋಡುವವರೋ, ಅವರೇ ಅದರಲ್ಲಿ ಬೀಳುವವರು.
  —ಬೈಬಲ್
- ಶಿಕ್ಷಣ ಮಾನವನನ್ನು ನೈತಿಕವಾಗಿ ಬೆಳೆಸುವ ಕಲೆಯಾಗಿರಬೇಕು.
  —ಹೆಗಲ್
- ಜೀವನದ ರಹಸ್ಯ ಅಡಗಿರುವುದು ಪರಸ್ಪರ ನಂಬಿಕೆ ಮತ್ತು ವಿಶ್ವಾಸಗಳಲ್ಲಿ ಮಾತ್ರ.
  —ಬೇಕನ್
- ಮನುಷ್ಯ ಬಾಳಬೇಕಾಗಿರುವುದು ದ್ವೇಷಕ್ಕಾಗಿ ಅಲ್ಲ, ವಿನಾಶಕ್ಕಾಗಿ ಅಲ್ಲ, ಬದುಕಿಗಾಗಿ ಮತ್ತು ಶಾಂತಿಗಾಗಿ.
  —ಡಾ. ರಾಧಾಕೃಷ್ಣನ್
- ಸ್ವಾತಂತ್ರ್ಯ, ಸಮಾನತೆ ಮತ್ತು ಸಹೋದರತ್ವವನ್ನು ಬೋಧಿಸುವ ಧರ್ಮವನ್ನು ನಾನು ಪ್ರೀತಿಸುತ್ತೇನೆ.
  —ಡಾ.ಬಿ.ಆರ್. ಅಂಬೇಡ್ಕರ್
- ಬಾಳು ಇರುವುದು ಬದುಕುವುದಕ್ಕಾಗಿ, ಬದುಕಿ ಬೆಳೆಯುವುದಕ್ಕಾಗಿ.
  —ಶಿವರಾಮ ಕಾರಂತ
- ಮನುಷ್ಯ ತನ್ನ ಶಕ್ತಿ ಮೀರಿ ಸಾಧಿಸಲು ಯತ್ನಿಸಬೇಕು.
  —ರಾಬರ್ಟ್ ಬ್ರೌನಿಂಗ್
- ಅಧಿಕಾರ ಮುಟ್ಟಿದ್ದನ್ನೆಲ್ಲ ಸಾಂಕ್ರಾಮಿಕ ರೋಗದಂತೆ ಕಲುಷಿತಗೊಳಿಸುತ್ತದೆ.
  —ಪಿ.ಬಿ. ಷೆಲ್ಲಿ